


ಪದ್ಯ

# ನೊಂದ ಚುಕ್ಕೆ




-ಗುರುರಾಜ ಬೇಣಕಲ್



ಚುಕ್ಕೆಯು ನೆಲದಲಿ
ನಡೆಯುತಲಿತ್ತು
ಕಲ್ಲನು ಎಡವುತ
ಕೆಳಗಡೆ ಬಿತ್ತು ॥

ಅಯ್ಯೋ ಎನ್ನನು
ರಕ್ಷಿಸಿ ಎಂದು,
ಅಳುತಲಿ ಹಲುಬಿತು
ಏಟನು ತಿಂದು ॥



ಕೆಡೆದಿಹ ಚುಕ್ಕೆಗೆ
ಆಸರೆ ಇಲ್ಲ,
ಅಳುವರ ನೋಡಿ
ನಗುವರೆ ಎಲ್ಲ ॥

ಇನ್ನು ನಾ ನೆಲದಲಿ
ಇರುವುದೇ ಬೇಡ,
ಎನ್ನುತ ಬಾನಿಗೆ
ಹಾರಿತು ನೋಡ ॥



# ಅಭ್ಯಾಸ

## I. ಪದಗಳ ಅರ್ಥ ತಿಳಿಯಿರಿ.

1. ಚುಕ್ಕಿ = ನಕ್ಷತ್ರ (Star)
2. ಆಸರೆ = ಆಶ್ರಯ (Shelter)
3. ನೆಲ = ಭೂಮಿ (Earth)
4. ಕೆಡೆ = ಬೀಳು (Fall)
5. ರಕ್ಷಿಸು = ಕಾಪಾಡು (Save)
6. ಏಟು = ಪೆಟ್ಟು (Beat)
7. ಬಾನು = ಆಕಾಶ (Sky)

## II. ವಿರುದ್ಧ ಪದಗಳನ್ನು ಬರೆಯಿರಿ.

1. ಕೆಳಗಡೆ × ______ 2. ಬೀಳು × ______
3. ಅಳು × ______ 4. ಬೇಡ × ______

## III. ಕೊಟ್ಟಿರುವ ಪದ್ಯ ಭಾಗಗಳನ್ನು ಬರೆಯಿರಿ.

ಚುಕ್ಕೆಯು ..............................
..............................
..............................
ಕೆಳಗಡೆ ಬಿತ್ತು ॥



ಕೆಡೆದಿಹ ಚುಕ್ಕೆಗೆ ..............................
..............................
..............................
ನಗುವರೆ ಎಲ್ಲ ॥

## IV. ಬಿಟ್ಟಸ್ಥಳಗಳಲ್ಲಿ ಸರಿಯಾದ ಪದಗಳನ್ನು ತುಂಬಿರಿ.

1. ಅಯ್ಯೋ ಎನ್ನನು .................... ಎಂದು.
2. ಅಳುತಲಿ .................... ಏಟನು ತಿಂದು.
3. ಕೆಡೆದಿಹ ಚುಕ್ಕಿಗೆ .................... ಇಲ್ಲ.
4. ಈ ಕವಿತೆಯನ್ನು ಬರೆದವರು .................... .

## V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಚುಕ್ಕೆಯು ಎಲ್ಲಿ ನಡೆಯುತ್ತಿತ್ತು?

___

2. ಚುಕ್ಕೆಯು ಕೆಳಗಡೆ ಬಿದ್ದದ್ದು ಹೇಗೆ?

___

3. ಜನರು ಅಳುವವರನ್ನು ನೋಡಿ ಏನು ಮಾಡುತ್ತಾರೆ?

___

4. ಬಾನಿಗೆ ಹಾರಿ ಹೋದದ್ದು ಯಾವುದು?

___



## ಚಟುವಟಿಕೆ

1. ಆಕಾಶ, ಚಂದ್ರ ಮತ್ತು ನಕ್ಷತ್ರಗಳನ್ನು ಬಿಡಿಸಿ ಬಣ್ಣ ತುಂಬಿಸಿ.